# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

**ಪ್ರಕರಣದ ಸಂಖ್ಯೆ : ಎಡಿಸ್ ಆರ್.ಆರ್.ಟಿ.ಎಸ್.ಆರ್ 50/2016-17**

**ದಿನಾಂಕ : 26-10-2016.**

ಉಪಸ್ಥಿತರು : ಡಾ. ರಾಜೇಂದ್ರ ಕೆ ವಿ .ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

| ಮೇಲ್ಮನವಿದಾರರು | ಪ್ರತಿವಾದಿಯವರು |
|---|---|
| ಅಬ್ದುಲ್ ಹಮೀದ್ | 1.ತಹಶೀಲ್ದಾರರು, |
| ಬಿನ್ ಎಚ್. ಮಹಮ್ಮದ್ | ಪುತ್ತೂರು ತಾಲೂಕು, ಪುತ್ತೂರು |
| ಹೊಸಮನೆ, ಗೋಳಿತೊಟ್ಟು ಗ್ರಾಮ | 2. ಖಾದರ್ ಭಾಷಾ |
| ಪುತ್ತೂರು ತಾಲೂಕು | ಬಿನ್ ಹೆಚ್ ಅಬ್ದುಲ್ಲ |
| (ನ್ಯಾಯವಾದಿ: ಶ್ರೀ ಬೆಟ್ಟ ಪಿ. ಈಶ್ವರ ಭಟ್ಟ) | ಗೋಳಿತೊಟ್ಟು, ಪುತ್ತೂರು |

******

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136 ರನ್ವಯ ಸಲ್ಲಿಸಿರುವುದಾಗಿದೆ. ಸದ್ರಿ ಮೇಲ್ಮನವಿದಾರರು ಹಾಗೂ ಎರಡನೇ ಪ್ರತಿವಾದಿಯವರು ಜಂಟಿಯಾಗಿ ಪುತ್ತೂರು ತಾಲೂಕು ಗೋಳಿತೊಟ್ಟು ಗ್ರಾಮದ ಸ.ನಂ: 137/2 ರಲ್ಲಿ 2.60 ಎಕ್ರೆ ಜಮೀನನ್ನು ಅಬ್ದುಲ್ ರಹಿಮಾನ್ ರಿಂದ ಖರೀದಿಸಿರುತ್ತಾರೆ. ನಂತರ ಈ ಜಮೀನನ್ನು ಮೇಲ್ಮನವಿದಾರರು ಹಾಗೂ ಎರಡನೇ ಪ್ರತಿವಾದಿಯವರು ವಿಭಾಗ ಪತ್ರದ ಮುಖಾಂತರ ತಮ್ಮೊಳಗೆ ಪುತ್ತೂರು ಸ.ರಿ. ಆಫೀಸಿನ ದ. ನಂ: 1022/2000-01 ರಂತೆ ದಿನಾಂಕ: 19/09/2001 ರಂತೆ ವಿಭಾಗ ಮಾಡಿಕೊಂಡಿರುತ್ತಾರೆ. ಅದರಲ್ಲಿ ವಿಭಾಗ ಪತ್ರದ ಎ ಶೆಡ್ಯೂಲ್ ನ ಸ.ನಂ 137/2ಬಿ1 ರಲ್ಲಿ ಮೇಲ್ಮನವಿದಾರರಿಗೆ 0.47 ಎಕ್ರೆ ಹಾಗೂ ಖಾದರ್ ಬಾಷಾರವರಿಗೆ ಬಿ ಶೆಡ್ಯೂಲ್ ನ ಸ.ನಂ: 137/2ಎ1 ರಲ್ಲಿ 1.96 ಎಕ್ರೆಯಂತೆ ಹಂಚಿಕೆಯಾಗಿರುತ್ತದೆ. ವಿಭಾಗ ಪತ್ರದ ಮುಖಾಂತರ ಆದ ದಾಸ್ತಾವೇಜು ಮ್ಯುಟೇಶನ್ ಆಗಿ ಪಹಣಿ ದಾಖಲಾಗುವ ಸಂದರ್ಭದಲ್ಲಿ ಎರಡನೇ ಪ್ರತಿವಾದಿಯವರ ಹಿಸ್ಸೆಯ ಆಸ್ತಿಯ ಪಹಣಿ ಅವರ ಹೆಸರಿಗೆ 1.96 ಎಕ್ರೆ ವಿಸ್ತೀರ್ಣಕ್ಕೆ ಸರಿಯಾಗಿ ದಾಖಲಾಗಿದ್ದು, ಮೇಲ್ಮನವಿದಾರರ ಹಿಸ್ಸೆಯ ಆಸ್ತಿಯ ವಿಸ್ತೀರ್ಣದಲ್ಲಿ 0.47 ಎಕ್ರೆಯ ಬದಲು 0.21 ಎಕ್ರೆ ಎಂದು ದಾಖಲಾಗಿತ್ತು. ಇದನ್ನು ಸರಿಪಡಿಸಲು ಮಾನ್ಯ ಸಹಾಯಕ ಕಮೀಷನರ್ ರವರಿಗೆ ಮನವಿ ಸಲ್ಲಿಸಿ ಆರ್.ಆರ್.ಟಿ.ಸಿ.ಆರ್(ಪಿ.ಆರ್)04/14-15 ನೇ ವ್ಯವಹರಣೆಯಲ್ಲಿ 0.47 ಎಂದು ಸರಿಪಡಿಸಲಾಯಿತು. ಈ ರೀತಿಯಾಗಿ 0.47 ಎಕ್ರೆ ವಿಸ್ತೀರ್ಣಕ್ಕೆ ಪಹಣಿ ದಾಖಲಾಗುವ ಸಂದರ್ಭದಲ್ಲಿ ಮೇಲ್ಮನವಿದಾರರ ಹೆಸರಿನ ಜೊತೆಗೆ ತಪ್ಪಾಗಿ ಎರಡನೇ ಪ್ರತಿವಾದಿಯವರ ಹೆಸರೂ ಕೂಡ ಜಂಟಿಯಾಗಿ ದಾಖಲಾಗಿರುತ್ತದೆ. ಇದರಿಂದ ಬಾಧಿತರಾದ ಮೇಲ್ಮನವಿದಾರರು ಪುತ್ತೂರು ತಾಲೂಕು ತಹಶೀಲ್ದಾರರು

ಆರ್.ಆರ್.ಟಿ.ಸಿ.ಆರ್: 283/15-16 ದಿ: 21/03/2016 ರಂತೆ ನೀಡಿದ ಹಿಂಬರಹದ ವಿರುದ್ಧ ಈ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿದೆ.

ಮೇಲ್ಮನವಿಯನ್ನು ವಿಚಾರಣೆಗೆ ಅಂಗೀಕರಿಸಿ ದಿ: 13/07/2016 ರಿಂದ ದಿನಾಂಕ 03/08/2016 ರರವರೆಗೆ ವಿವಿಧ ದಿನಾಂಕಗಳಂದು ತನಿಖೆಗೆ ಮುಂದೂಡಿ ಅಂತಿಮವಾಗಿ ದಿನಾಂಕ 03/08/2016 ರಂದು ವಿಚಾರಣೆ ನಡೆಸಿ ಆದೇಶಕ್ಕೆ ಮುಂದೂಡಲಾಯಿತು. ವಿಚಾರಣೆ ಕಾಲದಲ್ಲಿ ಮೇಲ್ಮನವಿದಾರರು ಸಲ್ಲಿಸಿದ ಲಿಖಿತ ವಾದದಲ್ಲಿ ಮೇಲ್ಮನವಿಯಲ್ಲಿರುವ ಅಂಶಗಳನ್ನೇ ಪುನರುಚ್ಚರಿಸಿರುತ್ತಾರೆ.

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಹಾಗೂ ಈನ್ಯಾಯಾಲಯದ ಆದೇಶ ಸಂಖ್ಯೆ ಆರ್.ಆರ್.ಟಿ.ಸಿ.ಆರ್(ಪಿ.ಆರ್)04/14-15 ನೇ ವ್ಯವಹರಣೆಯಲ್ಲಿ 0.47 ಎಂದು ಸರಿಪಡಿಸಲಾಗಿದ್ದರೂ 0.47 ಎಕ್ರೆ ವಿಸ್ತೀರ್ಣಕ್ಕೆ ಪಹಣಿ ದಾಖಲಾಗುವ ಸಂದರ್ಭದಲ್ಲಿ ಮೇಲ್ಮನವಿದಾರರ ಹೆಸರಿನ ಜೊತೆಗೆ ತಪ್ಪಾಗಿ ಎರಡನೇ ಪ್ರತಿವಾದಿಯವರ ಹೆಸರೂ ಕೂಡ ಜಂಟಿಯಾಗಿ ದಾಖಲಾಗಿರುವುದನ್ನು ಗಣನೆಗೆ ತೆಗೆದುಕೊಂಡು ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ.

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಪುತ್ತೂರು ಸಬ್ ರಿಜಿಸ್ಟ್ರಾರ್ ಕಚೇರಿಯ ನೊಂದಾಯಿತ ದಸ್ತಾವೇಜು ನಂ 1022/2000-01 ದಿನಾಂಕ 19-9-2001ರಂತೆ ಹಿತಾಸಕ್ತಿದಾರರೆಲ್ಲರಿಗೂ ನೋಟೀಸು ಮಾಡಿ ನಿಯಮಾನುಸಾರ ಪರಿಶೀಲಿಸಿ ಪಹಣಿ ದಾಖಲಿಸಲು ತಹಶೀಲ್ದಾರರು, ಪುತ್ತೂರು ತಾಲೂಕು, ಪುತ್ತೂರು ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ: 26-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

ಡಾ. ರಾಜೇಂದ್ರ. ಕೆ.ವಿ. ಐ.ಎ.ಎಸ್

ಸಹಾಯಕ ಆಯುಕ್ತರು.

ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ: ಶ್ರೀ ಬೆಟ್ಟ ಪಿ ಈಶ್ವರ ಭಟ್ಟ ಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಪುತ್ತೂರು ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.